LAND REFORMS PROBLEM ON WAR FOOTING

650 Sri M. S. KRISHNAN (Malleswaram).—

Will the Minister for Revenue be pleased to state.—

(*a*) whether the Government is aware of the call given by the Union Home Minister at the recent Southern Zonal Council Meeting to tackle Land Reforms problems on a war footing so as to ensure effective imposition of ceilings and systematic distribution of surplus and Government lands to landless agriculturists.

(*b*) if so, the steps the Government is taking or proposing to take to tackle the land reforms problems on a war footing ?

Sri H. V. KOUJALGI (Minister for Revenue.—)

(*a*) Yes.

(*b*) The number of Courts which will dispose of the applications filed under the Land Reforms Act has been practically doubled. The pace of disposal is expected to be further improved by transfer of functions of an executive character to the Revenue Department from the Land Tribunal Courts. A State Level Review Committee with the Chief Minister as Chairman and including several Hon,ble Members of the Legislature has been constituted periodically to review progress and suggest measures to further improve speed and efficiency in implementation of the Land Reforms Programme. The Land Grant rules have been throroughly revised and simplified and higher powers are vested in local officers of the Revenue Department. Taluk Level Consultative Committees including responsible non-officials are about to be set up in order to ensure quick, fair and systematic disposal to the poor and landless of Government lands available for being given out for cultivation.

ಶ್ರೀ ಎಂ. ಎಸ್. ಕೃಷ್ಣನ್.—(ಬಿ) ಪ್ರಶ್ನೆಗೆ ಕೊಟ್ಟಿರುವ ಉತ್ತರದ ಪ್ರಕಾರ ಕೋರ್ಟುಗಳು ಇತ್ಯರ್ಥ ಮಾಡುವುದರಿಂದ ಬೇಗ ಕೇಸುಗಳು ಡಿಸ್‌ಪೋಸ್ ಆಗುತ್ತವೆಯೇ ? ಇದನ್ನು ವಾರ್ ಫೂಟಿಂಗ್ ಎಂದು ಕರೆಯಬಹುದೇ ?

ಶ್ರೀ ಎಚ್. ವಿ. ಕೌಜಲಗಿ.—ಮುನ್ಸೀಫ್ ಕೋರ್ಟಿಗೆ ಎಲ್ಲಾ ಅಧಿಕಾರವನ್ನೂ ಕೊಡಲಾಗಿದೆ. ಈಗ ಕೋರ್ಟುಗಳ ಸಂಖ್ಯೆ ಇನ್ನೂರಕಿಂತ ಹೆಚ್ಚಾಗಿದೆ, ಜ್ಯುಡಿಷಿಯಲ್ ಮತ್ತು ಎಗ್ಸಿಕ್ಯೂಟಿವ್ ಫಂಕ್ಷನ್ ಬೇರೆ ಮಾಡಲಾಗಿದೆ, ಕೋರ್ಟುಗಳು ಜ್ಯುಡಿಷಲ್ ಫಂಕ್ಷನ್ ಮಾತ್ರ ನೋಡಿಕೊಳ್ಳುವುದರಿಂದ ತಿರ್ವವಾಗಿ ಕೆಲಸವಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಭೂ ಪರಿಮಿತಿ ಕಡಿಮೆಮಾಡಬೇಕು, ೧೫-೨೦ ಎಕರೆ ಮಾಡಬೇಕು, ಇದರ ಜೊತೆಗೆ ಭೂಮಿಯನ್ನು ಟೆನೆಂಟಂಗಳಿಗೆ ಕೊಡಬೇಕು, ಅದಕ್ಕೆ ತಾರೀಖು ನಿಗದಿಮಾಡಬೇಕು ಎಂದು

(ಶ್ರೀ ಎಂ ಎಸ್. ಕೃಷ್ಣಪ್ಪ)

ಹೇಳುವಾಗ ಇಂಥ ದಿವಸದಿಂದ ಹಾಗೆ ಮಾಡುತ್ತೇವೆಂದು ಗೊತ್ತುಮಾಡಬೇಡವೇ. ಫೇರ್ ರೆಂಟ್ ನಿಗದಿ ಮಾಡಲು ಇರುವ ಪ್ರೋಸಿಜರ್ ಸರಿಯಾಗಿಲ್ಲ, ಇದರಿಂದ ನ್ಯಾಯ ದೊರೆಯುತ್ತಿಲ್ಲ ಎಂದು ದಕ್ಷಿಣ ಕನ್ನಡ ದವರು ಹೇಳಿಲ್ಲವೇ ಇದರ ಬಗ್ಗೆ ಸರಿಯಾದ ಅಭಿಪ್ರಾಯವೇನು ?

ಶ್ರೀ ಎಚ್. ವಿ. ಕೌಜಲಗಿ.—ಜಾಗ್ರತೆಯಾಗಿ ಕಾನೂನನ್ನು ಅಮಲಿಗೆ ತರಬೇಕೆಂಬ ಉದ್ದೇಶದಿಂದಲೇ ಕೋರ್ಟುಗಳ ಸಂಖ್ಯೆ ಜಾಸ್ತಿಮಾಡುವುದು ಮುಂತಾದ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—೧೯೩೩–೧೯೩೪ರಲ್ಲಿ ಮಹಾತ್ಮಾ ಗಾಂಧಿಯವರು ಪ್ರಚಾರ ಮಾಡಿದಾಗ ಎರಡು ಕಮಿಟಿಗಳಿದ್ದುವು. ಆ ಎರಡು ಸಮಿತಿಗಳೂ ಕೆಲಸಮಾಡುವುದಾದರೆ ಅದಕ್ಕೆ ಉತ್ತೇಜನ ಕೊಡುವಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಯಾವುದೋ ಗೊತ್ತಿಲ್ಲ. ಅವು ಜೀವಂತ ಇವೆಯೋ ಎಂಬುದೂ ತಿಳಿಯದು. ೧೯೩೦ನೆಯ ಇಸವಿಯ ವಿಚಾರ ೧೯೭೦ನೆಯ ಇಸವಿಯಲ್ಲಿ ಹೇಳಲು ಆಗುವುದಿಲ್ಲ.

೨–೦೦ ಪಿ.ಎಂ.

ಶ್ರೀ ಎನ್. ಚಿಕ್ಕೇಗೌಡ.—ಹೆಚ್ಚುವರಿ ಭೂಮಿಯನ್ನು ಹಂಚುವುದಕ್ಕೆ ಕಮಿಟಿಗಳನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ಕಮಿಟಿಗಳು ಆಗುವವರೆಗೂ ಜಮೀನನ್ನು ದರಖಾಸ್ತು ಮೂಲಕ ಹಂಚಬಾರದು ಎಂದು ಆದೇಶವನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೊಟ್ಟಿಲ್ಲವೆ? ಆದುರಿಂದ ಮೀನು ಹಂಚಿಕೆ ಕೆಲಸ ಸ್ಥಗಿತಗೊಂಡಿಲ್ಲವೆ? ತಾಲ್ಲೂಕು ಸಲಹಾ ಸಮಿತಿಗಳನ್ನು ಯಾವಾಗ ಮಾಡಲಾಗುತ್ತದೆ

ಶ್ರೀ ಎಚ್. ವಿ. ಕೌಜಲಗಿ —ತಾಲ್ಲೂಕು ಕಮಿಟಿಗಳನ್ನು ಆದಷ್ಟು ಜಾಗ್ರತೆ, ಈ ಅಧಿವೇಶನ ಮುಗಿಯುವುದರೊಳಗಾಗಿ ಮಾಡುತ್ತೇವೆ ಎಂದು ಕೆಲವುದಿನಗಳ ಹಿಂದೆ ಹೇಳಿದ್ದೇನೆ. ಕಮಿಟಿಗಳು ಆಗುವವರೆಗೂ ಇರತಕ್ಕ ಭೂಮಿಯನ್ನು ಹಂಚಬಾರದು ಎನ್ನುವ ಆದೇಶವನ್ನು ಯಾವತ್ತೂ ಜಿಲ್ಲಾಧಿಕಾರಿಗಳಿಗೆ ಕೊಟ್ಟಿಲ್ಲ.

ಶ್ರೀ ಬೋಳರಘುರಾಮ ಶೆಟ್ಟಿ.—ಭೂಮಸೂದೆಯನ್ನು ಅವಸರದಿಂದ ತರಲಾಗಿದೆ ನುತ್ತು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಿಶೇಷ ಪರಿಸ್ಥಿತಿ ಎಂದರೆ ಅಳಿಯ ಸಂತಾನ ಪದ್ಧತಿ, ಮತ್ತು ರೈತವಾರಿ ಪದ್ಧತಿ ಏನಿದೆ ಅದಕ್ಕೆ ಅನ್ಯಾಯವಾಗಿದೆ ಎಂದು ಬಹಳ ಸಮಯದಿಂದ ಚಳುವಳಿ ಮಾಡುತ್ತಿದ್ದಾರೆ. ಮೊನ್ನೆ ಅಲ್ಲಿ ಧರಣಿ ಮಂಪ್ಪರ ಕೂಡ ಮಾಡಿದಾರೆ. ರಾಜ್ಯ ಮಟ್ಟದಲ್ಲಿ ಕೂಡ ಆಗಬಹುದು. ಅವರಿಗೆ ಶ್ರೀಘ್ರವಾಗಿ ಪರಿಹಾರ ಒದಗಿಸುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಕಾಯದೆಯನ್ನು ಅವಸರದಲ್ಲಿ ತಂದಿಲ್ಲ. ೧೯೬೨ರಲ್ಲಿ ಪಾಸಾಗಿ ೧೯೬೫ರಲ್ಲಿ ಅಮಲಿನಲ್ಲಿ ಬಂದಿದೆ. ಅಳಿಯಸಂತಾನದ ವಿಚಾರ ಇದರೊಳಗೆ ಬರುವುದಿಲ್ಲ. ಭೂ ಮಾಲೀಕ ಮತ್ತು ಗೇಣಿದಾರರಿಗೆ ಇರುವ ಸಂಬಂಧದಬಗ್ಗೆ ಮಾತ್ರ ನಮ್ಮಮುಂದೆ ಇದೆ.

Sri D. B. KALMANKAR.—May I know whether the Government thinks that the steps taken are sufficient to meet the problems of land reforms in the villages or some drastic steps are necessary?

Sri H. V. KOUJALGI.—So far as the Government is concerned, present measure is sufficient. If any other measure is suggested by the Hon. Member, it will be considered.

ಶ್ರೀ ಬಿ. ಪಿ. ಗಂಗಾಧರ.—ವಾರ್ ಪುಟಿಂಗ್‌ನಲ್ಲಿಮಾಡಬೇಕು ಎಂದು ಶ್ರೀ ಕೃಷ್ಣನ್ ಅವರು ಹೇಳುತ್ತಿದ್ದಾರೆ. ಪ್ರತಿ ಹಳ್ಳಿಯಲ್ಲಿಯೂ ಕೂಡ ಪವರ್‌ಫುಲ್ ಆಗಿರುವ ಜನ ಗೇಣಿದಾರರನ್ನು ತಪ್ಪಿಸಿ, ಪಹಣಿಯಲ್ಲಿ ತಮ್ಮ ಹೆಸರನ್ನು ಬರಸಿಕೊಂಡು ವಾರ್ ಪುಟಿಂಗ್ ಮೇಲೆ ಎವಿಕ್ಟೆ ಮಾಡುತಿದ್ದಾರೆ ಅಂಥವರಿಗೆ ಏನಾದರೂ ರಕ್ಷಣೆಯನ್ನು ಸರ್ಕಾರ ಕೊಡುವುದೆ?

ಶ್ರೀ ಎಚ್. ವಿ. ಕೌಜಲಗಿ.—ವಾರ್ ಪುಟಿಂಗ್ ಎಂದರೆ ಪದಶಃ ಅರ್ಥವಲ್ಲ ಹೆಚ್ಚು ಜಾಗ್ರತೆಯಾಗಿ ಆಗಬೇಕು ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳುವಂಥದ್ದು ಏನೂ ಆಗಿಲ್ಲ.

ಶ್ರೀ ಎಂ. ನಾಗಪ್ಪ.—ಅನೇಕ ತಾಲ್ಲೂಕು ಕೋರ್ಟುಗಳಲ್ಲಿ ೮೦೦, ಒಂದುಸಾವಿರ, ಎರಡುಸಾವಿರ ಹೀಗೆ ಅರ್ಜಿಗಳು ಪೆಂಡಿಂಗ್ ಇವೆ, ಒಂದು ದಿವಸಕ್ಕೆ ಒಂದು ಅಪ್ಲಿಕೇಷನ್ ಇತ್ಯರ್ಥ ಮಾಡಿದರೂ ಸಹಿತ ಎಷ್ಟು ವರ್ಷಗಳಾಗುತ್ತವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ದೃಷ್ಟಿಯಿಂದ ವಾರ್ ಪುಟಿಂಗ್ ಮೇಲೆ ಮಾಡಿದರೂ ೨೦ ವರ್ಷಕಾಲ ಹಿಡಿಯುತ್ತದೆ, ಎನ್ನುವುದನ್ನು ಒಪ್ಪುತಾರೆಯೇ? ಇಲ್ಲ ಎಂದರೆ ಎಷ್ಟುವರ್ಷದೊಳಗೆ ಭೂ ಸುಧಾರಣಾ ಕಾಯದೆಯನ್ನು ಪೂರ್ತಿಯಾಗಿ ಕಾರ್ಯಗತ ಮಾಡುತ್ತಾರೆ ಎಂದು ಸಮಯವನ್ನು ನಿಗದಿ ಮಾಡಿದ್ದಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಎಲ್ಲೋ ಒಂದೆರಡು ಕೋರ್ಟಿನ ಉದಾಹರಣೆಯನ್ನು ಹೇಳುತ್ತಿದ್ದಾರೆ. ಕೆಲವುಕಡೆ ಸಿವಿಲ್‌ಗೆ ಸಂಬಂಧಪಟ್ಟ ಕೇಸುಗಳಿಲ್ಲ. ಕ್ರಿಮಿನಲ್ ಕೇಸುಗಳು ಕೆಲವುಕಡೆ ಇವೆ. ಆದ್ದರಿಂದ ಕೆಲಸ ಹೆಚ್ಚಿಗೆ ನಡೆಯುತ್ತದೆ. ಎಲ್ಲಿ ಹೆಚ್ಚು ಕೆಲಸವಿರುತ್ತದೆ ಅಲ್ಲಿ ಅವಶ್ಯವೆನಿಸಿದರೆ ಹೆಚ್ಚಿನ ಕೋರ್ಟು ನೇಮಿಸುವುದಕ್ಕೆ ವಿಚಾರಮಾಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಜುಡಿಷಿಯಲ್ ಫಂಕ್ಷನ್ಸ್‌ನಲ್ಲಿ ಬಹಳಕಾಲ ವಿಳಂಬವಾಗುತ್ತಿರುವುದರಿಂದ ಅದನ್ನು ತೀವ್ರಗೊಳಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಚ್. ವಿ. ಕೌಜಲಗಿ.—ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆಇಲ್ಲ. ಇದನ್ನು ಕಾಯದೆಬದ್ಧವಾಗಿ ಅಮಲು ಮಾಡಬೇಕಾಗುತ್ತದೆ.

ಶ್ರೀ ಬಿ ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿದಾರರ ಸಂಖ್ಯೆ ಜಾಸ್ತಿಇದೆ ಐದು ವರ್ಷಗಳಿಂದ ಬಲಿಷ್ಠವಾದ ಹಿಡುವಳಿದಾರರು ಗೇಣಿದಾರರನ್ನು ಒಕ್ಕಲು ಎಬ್ಬಿಸುತ್ತಿದ್ದಾರೆ, ಬಲಿಷ್ಠವಾದ ಒಕ್ಕಲುಗಳು ಗೇಣಿ ಕೊಡುತ್ತಿಲ್ಲ. ಇದುವರೆಗೂ ನ್ಯಾಯ ಗೇಣಿನಿಗದಿಮಾಡಿಲ್ಲ. ಇಲ್ಲಿ ಸೂಕ್ತ ಪರಿಹಾರವನ್ನು ಕೊಡಲು ಒಂದು ಎಮರ್ಜೆನ್ಸಿ ಪವರ್ ತೆಗೆದುಕೊಂಡು ಬಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿಸಿಕ್ಕುವ ಹಾಗೆ ಏನಾದರೂ ಕಾನೂನು ಮಾಡುತ್ತಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ದಕ್ಷಿಣ ಕನ್ನಡ ಜಿಲ್ಲೆಯ ಗೇಣಿ ಸಂಬಂಧದಲ್ಲಿ ಮಾನ್ಯ ಸದಸ್ಯರು ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದರು. ಆ ಸಂಬಂಧವಾಗಿ ಕೋರ್ಟಿಗೆ ಹೋಗಿ ತಡೆ ಆಜ್ಞೆ ಆದುದರಿಂದ ತಡವಾಗಿದೆ. ಈಗ ತಡೆ ಆಜ್ಞೆ ತೆಗೆದಿದ್ದಾರೆ. ಎಲ್ಲಕೋರ್ಟುಗಳಲ್ಲಿಯೂ ಈಗ ಒತ್ತಡದಿಂದ ಕೆಲಸ ನಡೆಸಿದ್ದಾರೆ.

ಶ್ರೀ ಎಂ. ಎಸ್ ಕೃಷ್ಣನ್.—ಈ ಕಾನೂನು ಪೂರ್ತಿಯಾಗಿ ಜಾರಿಗೆ ಬರಲು ಇನ್ನು ಕಾಲ ವಿಳಂಬವಾಗುತ್ತದೆ ಎನ್ನುವುದನ್ನು ಸರ್ಕಾರ ಮನಗಂಡಿದೆಯೇ? ಭೂ ಸುಧಾರಣಾ ಕಾನೂನನ್ನು ತಂದು ಏನು ಗುರಿಗಳನ್ನು ಸಾಧಿಸಬೇಕು ಎಂದುಇದ್ದಾರೆ ಅದನ್ನು ನಿಜವಾಗಿಯೂ ಸಾಧಿಸುತಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಈ ಕಾಯದೆಯ ಪ್ರಯೋಜನವನ್ನು ಬೇಗ ರೈತರಿಗೆ ಮಾಡಿಕೊಡಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ.

Mr. SPEAKER.—Now Question Hour is over. Now short Notice Question.